ಶ್ರೀ ಅಜೀಜ್ ಸೇಠ್.—ಮಾನ್ಯ ಸಭಾಧ್ಯಕ್ಷರೆ, ಅರ್ಜಿ ಹಾಕಿದವರ ವಿವರಗಳು ಹೀಗೆ ಇದೆ. ಹರಿಜನರು–೨೦೯, ಗಿರಿಜನರು–೮೭, ಎಕ್ಸ್ ಸರ್ವಿಸ್‌ಮನ್ ೬೨,ರಾಜಕೀಯ ಸಂತ್ರಸ್ತರು–೧ (ಒಂದು) ವರ್ತಾರ್ಜನಲ್ ಫಾರ್ಮರ್ಸ್–೧೦೮ ಮತ್ತು ಇತರರು ೫೧. ಜಮೀನಿಗಾಗಿ ಅರ್ಜಿಗಳನ್ನು ಕೊಡುವವರಿಗೆ ಬೇಡ ಎಂದು ಹೇಳುವ್ದಿಲ್ಲ ಹಾಗಿಲ್ಲ. ಅಂತೆಯೇ ಆ ಕ್ಷೇತ್ರದಲ್ಲಿ ಜಮೀನು ಇಲ್ಲ ಎಂದು ತಿಳಿಸ ಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಭಾಧ್ಯಕ್ಷರೆ, ಹಿಂದಿನ ಸರಕಾರದವರು ಗೋಮಾಳ ಜಮೀನಿನಲ್ಲಿ ಯಾವ ದರಖಾಸ್ತು ಕೂಡ ಮಂಜೂರು ಮಾಡಬಾರದು ಅದನ್ನು ಕಡಿತ ಮಾಡಬಾರದು ಎಂದು ನಿರ್ಣಯ ಮಾಡಿದ್ದಾರೆ ಆ ಕಾರಣಕ್ಕಾಗಿ ಜಮೀನು ಇದ್ದಾಗಲೂ ಕೂಡ ಅಧಿಕಾರಿಗಳು ಜಮೀನು ಇಲ್ಲವೆಂದು ಹೇಳುತ್ತಿರುತ್ತಾರೆ. ಆದುದರಿಂದ ದಯ ಮಾಡಿ ಹಿಂದಿನ ಸರಕಾರದ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೀರೋ ಹೇಗೆ ಎಂಬ ಬಗ್ಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಠ್.—ನನ್ನ ತಿಳುವಳಿಕೆ ಪ್ರಕಾರ ಗೋಮಾಳದ ಪ್ರಶ್ನೆ ಇಲ್ಲಿ ಇಲ್ಲ. ಈ ಪರ್ಟಿಕುಲರ್ ತಾಲ್ಲೂಕ್‌ನಲ್ಲಿ ಜಮೀನು ಇಲ್ಲ. ಆದರೂ ಈ ಬಗ್ಗೆ ಪುನ: ಪರಿಶೀಲಿಸುತ್ತೇನೆ.

ಹುಬ್ಬಳ್ಳಿ–ಧಾರವಾಡ ನೀರು ಸರಬರಾಜು ಯೋಜನೆಗಾಗಿ ಜಮೀನು ಸ್ವಾಧೀನ

೨೬. ಶ್ರೀ ಕೆ.ಹೆಚ್. ಪಾಟೀಲ್ (ಗದಗ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ ಧಾರವಾಡ ನೀರು ಸರಬರಾಜು ಯೋಜನೆಗಳಿಗೆ ೧೫೪ ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಂಡಿರುವುದು ನಿಜವೇ,

ಆ) ಹಾಗಿದ್ದಲ್ಲಿ ಅಷ್ಟು ವಿಸ್ತೀರ್ಣ ಜಮೀನನ್ನು ಸದರಿ ಯೋಜನೆಗೆ ಉಪಯೋಗಿಸಿಕೊಳ್ಳಲಾಗಿದೆಯೇ,

ಇ) ಸದರಿ ಜಮೀನನ್ನು ೭೯ ಜನ ಒತ್ತುವರಿ ಮಾಡಿರುವುದು ನಿಜವೇ,

ಈ) ಹಾಗಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅವರನ್ನು ಜಮೀನಿನಿಂದ ಹೊರ ಹಾಕಲು ಆದೇಶಿಸಿದ್ದಾರೆಯೇ,

ಉ) ಈಗ ವಿಷಯವು ಯಾವ ಹಂತದಲ್ಲಿದೆ ?

ಶ್ರೀ ಅಜೀಜ್ ಸೇಠ್ (ಕಂದಾಯ ಸಚಿವರು).—

ಅ) ಹಾದು ಕಲಕಟ್ಟಿಗೆ ತಾಲ್ಲೂಕು, ಜಮ್ಮಿಹಾಳ ಗ್ರಾಮದಲ್ಲಿ ೧೯೪೮–೪೯ರಲ್ಲಿ ೧೪೬–೧೮ ಎಕರೆ ಯನ್ನು ಹುಬ್ಬಳ್ಳಿ–ಧಾರವಾಡ ನೀರು ಸರಬರಾಜು ಯೋಜನೆಗಾಗಿ ಭೂಸ್ವಾಧೀನ ಮಾಡಲಾಗಿದೆ.

ಆ) ೪೦ ಎಕರೆ ಜಮೀನನ್ನು ಮಾತ್ರ ಸದರಿ ಯೋಜನೆಗೆ ಉಪಯೋಗಿಸಿಕೊಳ್ಳಲಾಗಿದೆ.

ಇ) ಹೌದು

ಈ) ಜಮೀನನ್ನು ಒತ್ತುವರಿ ಮಾಡಿರುವವರಿಗೆ ತಹಸೀಲ್ದಾರ್ ನೋಟೀಸ್‌ಗಳನ್ನು ಜಾರಿ ಮಾಡಿರುತ್ತಾರೆ.

ಧಾರವಾಡ ಸಹಾಯಕ ಆಯುಕ್ತರು ಅವರನ್ನು ಜಮೀನಿನಿಂದ ಹೊರ ಹಾಕುವ ಬಗ್ಗೆ ತಡೆಯಾಜ್ಞೆ ನೀಡಿರುತ್ತಾರೆ ಈ ಮಧ್ಯೆ ಕೆಲವರು ಜಮೀನನ್ನು ಒತ್ತುವರಿ ಮಾಡಿರುವವರಿಗೆ ಜಮೀನನ್ನು ಸಕ್ರಮಣ ಮಾಡಬಾರದೆಂದು ಮತ್ತು ಸದರಿ ಜಮೀನನ್ನು ಯಾರಿಗೂ ವಿಲೇವಾರಿ ಮಾಡದಂತೆ ಉಚ್ಚ ನ್ಯಾಯಾಲಯದಿಂದ ಆದೇಶವನ್ನು ಪಡೆದಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮಂತ್ರಿಮಹೋದಯರು ನಡೆದಿರುವ ಘಟನೆಯನ್ನು ಒಪ್ಪಿ ಕೊಂಡಿದ್ದು ನಿಜವಾಗಿಯೂ ಸ್ವಾಗತ ಪಡುವಂಥಾದ್ದು. ೧೪೬ ಎಕರೆಯನ್ನು ಅಕ್ವೈರ್ ಮಾಡಿದ ನಂತರ ಸದರಿ ಜಮೀನನ್ನು ಬೇರೆ ಉದ್ದೇಶಕ್ಕೆ ಉಪಯೋಗ ಮಾಡಬಾರದೆಂದು ಇದ್ದರೂ ಸಹ ೭೯ ಜನರು ಅದನ್ನು ಒತ್ತುವರಿ ಮಾಡಿದ ಮೇಲೆ ಮತ್ತು ಅಸಿಸ್ಟೆಂಟ್ ಕಮಿಷನರ್‌ರವರು ಅದಕ್ಕೆ ತಡೆಯಾಜ್ಞೆ ಕೊಟ್ಟಮೇಲೆ ಏನೇನೆಲ್ಲ ವಿಚಾರಣೆ ನಡೆಸಲಾಗಿದೆಯೇ ? ಆ ೭೯ ಜನರು ಯಾರೆಲ್ಲ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಅಜೀಜ್‌ಸೇಠ್.—ಆ ಲಿಸ್ಟ್ ನನ್ನ ಹತ್ತಿರ ಇಲ್ಲ. ಡಿ. ಸಿ. ಅವರು ಅದರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಮತ್ತೆ ಕೋರ್ಟ್ ಸಹ ಆ ಜಮೀನನ್ನು ಯಾರಿಗೂ ಕೊಡಬಾರದೆಂದು ಹೇಳಿರುವುದರಿಂದ. ಈ ಮಧ್ಯದಲ್ಲಿ ಧಾರವಾಡ ಜಿಲ್ಲಾಪರಿಷತ್ತಿನವರು they are requesting the Deputy Commissioner to transfer these lands in favour of them for the said purpose. The Deputy Commissioner is yet to take a decision in the matter in view of the High Court. The matter is still pending.

ಶ್ರೀ ಕೆ. ಹೆಚ್. ಪಾಟೀಲ್.—ಆ ೨೯ ಜನರ ಹೆಸರುಗಳು ತಮ್ಮ ಬಳಿ ಇಲ್ಲವೆಂದು ಹೇಳಿದಿರಿ. ಆ ಎ. ಸಿ. ಅವರು ತಡೆಯಾಜ್ಞೆ ನೀಡಿ ತಹಸೀಲ್ದಾರ್‌ರವರ ಕ್ರಮವನ್ನು ನಿಷೇಧಿಸಿದ್ದಾರಲ್ಲ, ಅದರ ಬಗ್ಗೆ ಏನಾದರೂ ಡಿಪಾರ್ಟ್‌ಮೆಂಟಲ್ ಎನ್‌ಕ್ವಿಯರಿ ಮಾಡಿಸುತ್ತೀರಾ ?

ಶ್ರೀ ಅಜೀಜ್ ಸೇಠ್,—ಅದನ್ನು ನೋಡಬೇಕಾಗುತ್ತದೆ. ಅವರು ಹೇಳಿರುವುದರಿಂದ ವಿಚಾರಿಸುತ್ತೇನೆ.

ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡಿದ ಸಬ್ಸಿಡಿ ಹಣ

೨೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ೧೯೮೭-೮೮, ೧೯೮೮-೮೯ ಹಾಗೂ ೧೯೮೯-೯೦ರಲ್ಲಿ ಸಹಾಯ ಧನ ನೀಡಿದ ಹಣವೆಷ್ಟು ?

ಆ) ಹಾಗಿದ್ದಲ್ಲಿ ಇನ್ನೂ ಸಹಾಯ ಧನ ನೀಡಬೇಕಾಗಿರುವ ಮೊತ್ತವೆಷ್ಟು ?

ಶ್ರೀ ಎಂ. ವೀರಪ್ಪ ಮೊಯ್ಲಿ (ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಿಗಳು).—

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಈ ಕೆಳಕಂಡಂತೆ ಸಹಾಯ ಧನವನ್ನು ವಿತರಿಸಲಾಗಿದೆ. (State Subsiby)

೧೯೮೭-೮೮ ರೂ. ೧೩೦.೦೨ ಲಕ್ಷಗಳು
೧೯೮೮-೮೯ ರೂ. ೨೨೪.೦೦ ,,
೧೯೮೯-೯೦ ರೂ. ೩೦೦.೦೦ ,,

ಆ) ದಿನಾಂಕ ೩೧-೩-೧೯೯೦ರವರೆಗೆ ಸಹಾಯ ಧನ ರೂಪದಲ್ಲಿ ರೂ. ೧ ೧೧೫.೦೦ ಲಕ್ಷ ರೂಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ರಾಜ್ಯ ಸರ್ಕಾರ ತಾನು ಸಣ್ಣ ಕೈಗಾರಿಕೆಗಳಿಗೆ ಕೊಡುವಂಥಾ ಸಬ್ಸಿಡಿ ಹಣದ ಬಾಕಿ ೩೧-೩-೯೦ಕ್ಕೆ ೧,೧೧೫ ಲಕ್ಷ ಎಂದು ಹೇಳಿದೆ. ಈ ಹಣ ಯಾವ್ಯಾವ ವರ್ಷದಿಂದ ಬಾಕಿ ಇದೆ, ಎಷ್ಟು ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಹಣ ಕೊಡಬೇಕಾಗಿದೆ ಯಾವಾಗ ಬಾಕಿ ಇರುವುದನ್ನು ಕೊಡಬೇಕೆಂದು ನಿಶ್ಚಯ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಇದು ಆಯಾಯ ವರ್ಷ ನಮ್ಮ ಆಯವ್ಯಯದಲ್ಲಿ ಸಂಯೋಜಿಸಿ ಕೊಡಬೇಕಾದಂಥ ಬಾಕಿ ಅದನ್ನು ಕೇಳಿಟ್ಟಿಲ್ಲ. ತಮಗೆ ಗೊತ್ತಿರುವ ಪ್ರಕಾರ ಒಟ್ಟು ಸಣ್ಣ ಕೈಗಾರಿಕೆಗಳು, ದೊಡ್ಡ ಕೈಗಾರಿಕೆಗಳು ಎಲ್ಲಾ ಸೇರಿ ಬಾಕಿ ಇರತಕ್ಕಂಥದ್ದು ಸಬ್ಸಿಡಿಯನ್ನು ಕೊಡತಕ್ಕಂಥದ್ದು ೨೦ ಕೋಟಿ ರೂಪಾಯಿ ಇದೆ. ಡೆವಲಪ್‌ಮೆಂಟ್ ಲೋನ್ ೧೬.೫೫ ಕೋಟಿ ರೂಪಾಯಿ ಇದೆ. ನಾನು ಇಲ್ಲಿ ಹಿಂದಿನ ಸರ್ಕಾರದವರನ್ನು ದೂರಲಿಕ್ಕೆ ನಿಂತಿಲ್ಲ. ಆದರೂ ಇದು ಹಿಂದಿನ ಸರ್ಕಾರದ ಬಳುವಳಿ. ಅದು ನಮ್ಮ ತಲೆಯಮೇಲೆ ಬಿಟ್ಟಿದೆ. ಇದನ್ನು ಆದಷ್ಟೂ ಜಾಗ್ರತೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಏಕೆಂದರೆ ಕೈಗಾರಿಕೆಗಳನ್ನು ಹೆಚ್ಚು ಮಾಡಬೇಕು ಎಂದು ಹೇಳಿ ಜನರನ್ನು ಆಕರ್ಷಣೆ ಮಾಡಿದ್ದೇವೆ ಅಥವಾ ಮುಖ್ಯವಾಗಿ ಸಣ್ಣ ಉದ್ದಿಮೆದಾರರನ್ನು ಕರೆಯುತ್ತಿದ್ದೇವೆ. ನಮ್ಮನ್ನು ನಂಬಿ ಅವರು ಕೈಗಾರಿಕೆಯನ್ನು ಪ್ರಾರಂಭ ಮಾಡಿರುತ್ತಾರೆ. ಆದಷ್ಟು ಜಾಗ್ರತೆ ಅವರ ಸಹಾಯಕ್ಕೆ ಬರಬೇಕು ಎನ್ನುವ ಉದ್ದೇಶ ನಮ್ಮ ಸರ್ಕಾರಕ್ಕೆ ಇದೆ. ಆದಷ್ಟು ಜಾಗ್ರತೆ ಅವರಿಗೆ ಇದನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಸುಮಾರು ನಾಲ್ಕೈದು ವರ್ಷಗಳಿಂದ ಇದು ಉಳಿದಂಥ ಬಾಕಿ ಹಣ. ಇದರ ಮೊತ್ತ ಎಷ್ಟು ಎಂದು ನಾನು ಈಗಾಗಲೇ ಹೇಳಿದ್ದೇನೆ.